ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ—

1884ನೇ ಇಸವಿ ಅರ್ಜೀ ನಂಬರ್ 136.

ಮೃತಪಟ್ಟ ವೆಂಕಟ್ರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬವರಿಂಗ್‌ಪೇಟೆ ತಾಲ್ಲೂಕು ಹಂಗಳದ ರಾಮಪ್ಪನವರ ಮಗ ಭಾಸ್ಕರ ಶೇತಾರಾಮಯ್ಯ, ಮೃತಪಟ್ಟ ಸದರೀ ವೆಂಕಟರಾಯರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ, ಬವರಿಂಗ್‌ಪೇಟೆ ತಾಲ್ಲೂಕು ಹಂಗಳದ ಸ್ಥಳದ ಭಾಸ್ಕರ ಶೇತಾರಾಮಯ್ಯನವರು ಹಂಗಳದ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭಾಸ್ಕರ ಶೇತಾರಾಮಯ್ಯನವರ ಅರ್ಜೀಯನ್ನು 1884ನೇ ಇಸವಿ ಸಪ್ಟಂಬರ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್‌ನಿಶಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಆಗಸ್ಟ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ಹಸ್ತಾಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಪಟೇಲ್ ಬಟ್ಟೇಗವುಡನ ಆಸ್ತಿ ವಿಷಯದಲ್ಲಿ—

ಡಿಟೋಯವನ ಮಗ ಬಟ್ಟು ಮೈನರ್, ಗಾರ್ಡಿಯ್ ಇವನ ತಾಯಿ ಅರ್ಜೀದಾರಳಾದ ದ್ಯಾವಮ್ಮ, ಮೃತಪಟ್ಟ ಸದರೀ ಪಟೇಲ್ ಬೆಟ್ಟೇಗವುಡನಿಗೆ ಹೆಂಡತಿ ಮತ್ತು ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶ್ರೀರಂಗಪಟ್ಟಣದ ತಾ॥ ಕ್ಯಾತನಹಳ್ಳಿ ಹೋಬಳಿ ಮಂಚನಹಳ್ಳಿ ಗ್ರಾಮದ ಸ್ಥಳದ ಬಟ್ಟ ಮೈನರ್, ಗಾರ್ಡಿಯ್ ದ್ಯಾವಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಬೆಟ್ಟೇಗವುಡನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಬಟ್ಟ ಮೈನರ್, ಗಾರ್ಡಿಯ್ ದ್ಯಾವಮ್ಮ ಇವರ ಅರ್ಜಿಯನ್ನು 1884ನೇ ಆಗಸ್ಟ್ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬಟ್ಟೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1884ನೇ ಇಸವಿ ಅರ್ಜೀ ನಂಬರ್ 266.

ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಡಿಟೋಯವನ ಮಗನಾದ ವೆಂಕಟಸ್ವಾಮಿ, ಮೃತಪಟ್ಟ ಸದರೀ ಕುಂಬಾರ ಚಿಂತಿ ರಾಮಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳಿ ಸ್ಥಳದ ವೆಂಕಟಸ್ವಾಮಯ್ಯ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸೂಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟಸ್ವಾಮಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟ್ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಬಾರ ಚಿಂತಿ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 296.

ಮೃತಪಟ್ಟ ಶಿವಾಚಾರದ ಮಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜಿದಾರಳಾದ ಡಿಟೋಯವನ ಹೆಂಡತಿ ಬಸಮ್ಮನು, ಮೃತಪಟ್ಟ ಸದರೀ ಮಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಂಡ್ಲು ತಾ|| ತೆರಕಣಾಂಬಿ ಹೋಬಳಿ ಬೊಮ್ಮನಹಳ್ಳಿ ಸ್ಥಳದ ಬಸಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟಮಾರಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಸಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಮಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎನ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಹೊಳೇನರಸೀಪುರದ ಮುನಶಿಫ್ ಕೋರ್ಟಿನಲ್ಲಿ.

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಮಳವಳ್ಳಿಯಲ್ಲಿರುವ ಹೊಳೇನರಸೀಪುರ ತಾಲ್ಲೂಕು ಗುರ್ನಹಳ್ಳಿ ಗುಂಡಪ್ಪನವರಿಗೆ, ತಿಳಿಯಪಡಿಸುವದೇನಂದರೆ,—ಹೊಳೆ ನರಸಿಪುರದಲ್ಲಿರುವ ಕುಂಭಕೋಣ ಸುಬ್ಬಂಣಾಚಾರು ನಿಮ್ಮ ಮೇಲೆ 1880ನೇ ಇಸವಿ ಫಿಬ್ರವರೀ 18ನೇ ಮಕ್ಕಂ ದಸ್ತೈವಜು ಬಗೆ 240 ರೂಪಾಯಿಗಾಗಿ ತಂದ ದಾವೆಯು, ಈ ಕೋರ್ಟು ಚಾಲ್ತೀ ಇಸವಿ ಸಿವಿಲ್ 315ನೇ ನಂಬರಿಗೆ ದಾಖಲಾಗಿ 1884ನೇ ಇಸವಿ ಸೆಪ್ಟಂಬರ್ 6ನೇ ತಾರೀಖಿಗೆ ಹಿಯರಿಂಗ್ ಯಿಟ್ಟಿರುತ್ತೇಯಾಗಿ ಆ ತಾರೀಖಿಗೆ ನೀವಾಗಲಿ ನಿಮ್ಮ ಪ್ಲೀಡರಾಗಲಿ ಹಾಜರಾಗಿ ಜವಾಬ್ ಕೊಡದೇ ಹೋದಲ್ಲಿ ಮೊಕದ್ದಮೆಯು ನಿಮ್ಮ ಗೈರ್ ಹಾಜರಿಯಲ್ಲಿ ಫೈಸಲ್ ಮಾಡಲ್ಪಡುತ್ತೆ, ಪ್ರಕಾರಾಂತರ ಸರ್ವಿಸ್ ಅಪ್ಪಣೆ ಆಗಿರುವ ಮೇರಿಗೆ ಸೂಲ ಕೊಂಚ ದೊಡ್ಡ ಮೊಬಲಗಾಗಿರುವದ್ದರಿಂದ ಈ ಪ್ರಕಟನೆಯು ಮಾಡಲ್ಪಟ್ಟಿಧೆ.

1884ನೇ ಇಸವಿ ಆಗಸ್ಟ್ 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಸುಬ್ಬರಾವ್,
ಮುನಶಿಫ್.

ನಂ. 6. ತಾರೀಖು 4ನೇ ಆಗಸ್ಟು 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇನರಸೀಪುರದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲೀ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೇ ಯಾಗಲೀ ಈ ನೋಟೀಸ್ ತಾರೀಖು ಲಗಾಯತು ಎಂದು ತಿಂಗಳ ಒಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಜೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
89	1881—82 ನರಸೀಪುರದ ತಾಲ್ಲೂಕು ಸೂರನಹಳ್ಳಿ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ಕೇಶವಯ್ಯನ ಹೆಂಡತಿ ಜೆಧಾಯಿತು ಜೀವನದ ನರಸಮ್ಮ	ಲೇಟ್ ಅರಕಲ್‌ಗೂಡು ತಾಲ್ಲೂಕು ಗುಬ್ಬಿ ವಾಸಸ್ಥ ಸ್ಮಾರ್ತ ಬ್ರಾಹ್ಮಣ ಗೋಣಿಬೀಡು ಸುಬ್ಬಾಭಟ್ಟರ ಮಗ ವೈದೀಕ ವೃತ್ತಿ ಜೀವನದ ನಂಜಪ್ಪ.	27—7—82	27—7—82	1,183—0—10ರೂಪಾಯಿನ ಜಮ್ಮಿ ಕ್ರಯಪತ್ರ.